1	2	3	4	5	6	7	8
20)	ಧಾರವಾಡ						
21)	ಗದಗ	3024.10	2245.07	965.27	50.00	35.51	45.00
22)	ಹಾವೇರಿ						
23)	ಉತ್ತರ ಕನ್ನಡ	2119.87	2429.50	2743.94	67.91	67.63	66.22
24)	ಬಳ್ಳಾರಿ	1257.61	988.53	1014.53	28.61	24.58	31.21
25)	ಬೀದರ್	4893.79	7058.63	9026.15	48.04	52.33	54.80
26)	ಗುಲ್ಬರ್ಗ	276.06	487.69	372.49	28.49	36.04	25.49
27)	ರಾಯಚೂರು						
28)	ಕೊಪ್ಪಳ	975.53	989.73	893.97	42.04	32.28	24.39
	ಒಟ್ಟು	**54523.83**	**67961.89**	**53235.63**	**47.37**	**49.09**	**44.33**
		545.24	**679.62**	**532.36**			ಕೋಟಿಗಳಲ್ಲಿ

ರಾಜ್ಯದಲ್ಲಿ ರಫ್ತು ಉತ್ತೇಜನಾ ಕೈಗಾರಿಕಾ ಪಾರ್ಕ್‌ಗಳು

3670(4168) ಶ್ರೀ ಪ್ರಭಾಕರ ಬಂಗೇರ. ಕೆ (ಬೆಳ್ತಂಗಡಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಕಡೆಗಳಲ್ಲಿ "ರಫ್ತು ಉತ್ತೇಜನಾ ಕೈಗಾರಿಕಾ ಪಾರ್ಕ್"ಗಳನ್ನು ಸ್ಥಾಪಿಸಲಾಗಿದೆ. ಅವುಗಳಲ್ಲಿ ಯಾವುವು ಕಾರ್ಯನಿರ್ವಹಿಸುತ್ತಿವೆ; ಮಂಗಳೂರಿನಲ್ಲಿ ಸದರಿ ಪಾರ್ಕ್‌ನ್ನು ಪ್ರಾರಂಭಿಸುವ ಯೋಜನೆ ಇದೆಯೇ; ವಿವರ ನೀಡುವುದು;

ಆ) ಇವುಗಳಲ್ಲಿ ಎಷ್ಟು ಘಟಕಗಳನ್ನು ಬಲಪಡಿಸುವ ಗುರಿ ಸರ್ಕಾರವು ಹೊಂದಲಾಗಿದೆ;

ಇ) ಇಲ್ಲಿಯವರೆಗೆ ಸದರಿ ಘಟಕಗಳಿಂದ ರಫ್ತು ಮಾಡಲಾದ ವಸ್ತುಗಳ ಮೊತ್ತ ಎಷ್ಟು?

ಶ್ರೀ ಆರ್. ವಿ. ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಬೆಂಗಳೂರಿನ ವೈಟ್‌ಫೀಲ್ಡ್ ಸಮೀಪ ಹೂಡಿಯಲ್ಲಿ ಮೊದಲನೆಯ ರಫ್ತು ಉತ್ತೇಜನಾ ಕೈಗಾರಿಕಾ ಪಾರ್ಕ್‌ನ್ನು ಈಗಾಗಲೇ 547 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗಿದೆ.

ಎರಡನೆಯ ರಫ್ತು ಉತ್ತೇಜನಾ ಕೈಗಾರಿಕಾ ಪಾರ್ಕ್‌ನ್ನು ಮಂಗಳೂರಿನ.ಬೈಕಂಪಾಡಿಯಲ್ಲಿ 200 ಎಕರೆ ಪ್ರದೇಶದಲ್ಲಿ ಎರಡು ಹಂತಗಳಲ್ಲಿ (ಪತ್ರಿ ಹಂತದಲ್ಲಿ ಸುಮಾರು 100 ಎಕರೆ) ರಫ್ತು ಉತ್ತೇಜನಾ ಕೈಗಾರಿಕಾ ಪಾರ್ಕ್‌ನ್ನು ಸ್ಥಾಪಿಸಲು ಕ್ರಮಕೈಗೊಳ್ಳಲಾಗಿದೆ. ಮೊದಲನೆಯ ಹಂತವಾಗಿ 105 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಮತ್ತು ಲೇಔಟ್ ನಕ್ಷೆ ತಯಾರಿಸುವ ಕಾರ್ಯವು ಪ್ರಗತಿಯಲ್ಲಿದೆ.

ಈ ಯೋಜನೆಗೆ ಬಿಡುಗಡೆ ಮಾಡಲಾದ ಹಣದ ವಿವರ ಕೆಳಕಂಡಂತಿರುತ್ತದೆ.

ಕ್ರಮ ಸಂಖ್ಯೆ	ವಿವರ	ಒಟ್ಟು (ರೂ.ಲಕ್ಷಗಳಲ್ಲಿ)
1)	ಕೇಂದ್ರ ಸರ್ಕಾರ	200.00
2)	ರಾಜ್ಯ ಸರ್ಕಾರ	342.00
	ಒಟ್ಟು	**542.00**

ಆ) ಬೆಂಗಳೂರಿನ ರಫ್ತು ಉತ್ತೇಜನಾ ಪಾರ್ಕಿನಲ್ಲಿ 83 ಘಟಕಗಳಿಗೆ 407 ಎಕರೆ ಪ್ರದೇಶವನ್ನು ಈಗಾಗಲೇ ಹಂಚಿಕೆ ಮಾಡಲಾಗಿದ್ದು, ಇದರಲ್ಲಿ 26 ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಇನ್ನೂ 20 ಘಟಕಗಳು ಕಾರ್ಯಗತವಾಗುವ ಹಂತದಲ್ಲಿವೆ.

ಮಂಗಳೂರಿನ ರಫ್ತು ಉತ್ತೇನಾ ಪಾರ್ಕಿನ ಮೊದಲನೇ ಹಂತವಾಗಿ ಸುಮಾರು 30 ಘಟಕಗಳನ್ನು ಬಲಪಡಿಸಲು ಉದ್ದೇಶಿಸಲಾಗಿದೆ.

ಇ) ಬೆಂಗಳೂರಿನ ರಫ್ತು ಪಾರ್ಕಿನಲ್ಲಿರುವ ಘಟಕಗಳಿಂದ ರಫ್ತು ಮಾಡಲಾದ ಮೌಲ್ಯ ಈ ಕೆಳಕಂಡಂತಿರುತ್ತದೆ;

ಕ್ರಮ ಸಂಖ್ಯೆ	ಅವಧಿ	ರಫ್ತು ಮೌಲ್ಯ (ರೂ. ಕೋಟಿಗಳಲ್ಲಿ)
1)	1-1-1998 ರಿಂದ 31-12-1998	35.59
2)	1-1-1999 ರಿಂದ 31-12-1999	88.21
3)	1-1-2000 ರಿಂದ 31-3-2000	69.66
4)	1-4-2000 ರಿಂದ 31-3-2001	361.36
5)	1-4-2001 ರಿಂದ 31-3-2002	774.75
	ಒಟ್ಟು	**1329.57**

ರಾಜ್ಯದಲ್ಲಿರುವ ಹಾಸ್ಟೆಲ್‌ಗಳಿಗೆ ಅನುದಾನ ನೀಡಿಕೆ

3671(4169) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ಸಂಘ ಸಂಸ್ಥೆಗಳವರು ನಡೆಸುತ್ತಿರುವ ಖಾಸಗಿ ಹಾಸ್ಟೆಲ್‌ಗಳೆಷ್ಟು;

ಅವುಗಳಲ್ಲಿ ಎಷ್ಟು ಹಾಸ್ಟೆಲ್‌ಗಳಿಗೆ ಸರ್ಕಾರ ಅನುದಾನ ನೀಡುತ್ತದೆ;

ಆ) ಹಿಂದುಳಿದ ವರ್ಗಗಳ ಜಾತಿ ಸಂಘಗಳು ನಡೆಸುತ್ತಿರುವ ಹಾಸ್ಟೆಲ್‌ಗಳಿಗೆ ಸರ್ಕಾರ ಅನುದಾನ ನೀಡುವ ಮೂಲಕ ಪ್ರೋತ್ಸಾಹಿಸುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಅನುದಾನಿತ 223 ವಿದ್ಯಾರ್ಥಿನಿಲಯಗಳು ನಡೆಯುತ್ತಿದ್ದು, ಅವುಗಳ ಪೈಕಿ 213 ಮೆಟ್ರಿಕ್ ಪೂರ್ವ ಹಾಗೂ 10 ಮೆಟ್ರಿಕ್ ವಿದ್ಯಾರ್ಥಿನಿಲಯಗಳಿವೆ. ಎಲ್ಲಾ 223 ವಿದ್ಯಾರ್ಥಿ ನಿಲಯಗಳು ಸರ್ಕಾರದಿಂದ ಅನುದಾನ ಪಡೆಯುತ್ತಿವೆ.

ಆ) ಹಿಂದುಳಿದ ವರ್ಗಗಳ ಸಂಘ ಸಂಸ್ಥೆಗಳು ನಡೆಸುವಂತಹ ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಅನುದಾನದ ಲಭ್ಯತೆಯ ಮೇರೆಗೆ ನಿಯಮಾನುಸಾರ ಅನುದಾನ ನೀಡುವುದರ ಮೂಲಕ ಸರ್ಕಾರವು ಪ್ರೋತ್ಸಾಹ ನೀಡುತ್ತದೆ.

ರಾಜ್ಯದಲ್ಲಿ ಅಪೆರಲ್ ಪಾರ್ಕ್ ಸ್ಥಾಪನೆ

3672(4171) ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?